ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಸಂಶೋಧನೆ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದು ನಿವೃತ್ತಿ ಹೊಂದಿದವರು ಮಹೇಶ್ವರಿ ಯು. ಲೇಖಕಿ ಮತ್ತು ಕವಯಿತ್ರಿಯಾಗಿ ಓದುಗರಿಗೆ ಪರಿಚಿತರು. ಕಣ್ಣೂರು ವಿಶ್ವವಿದ್ಯಾನಿಲಯದ ಭಾಷಾ ಅಧ್ಯಯನಾಂಗದಲ್ಲಿ ಮುಖ್ಯಸ್ಥರಾಗಿಯೂ ಕೆಲಸ ಮಾಡಿದ್ದರು. ವಿಮರ್ಶೆ ಅವರಿಗೆ ಪ್ರಿಯವಾದ ಕ್ಷೇತ್ರ.

ರಾಜ್ಯ ಪುನರ್ ರಚನಾ ಆಯೋಗದ ಅಜ್ಞಾನ ಎಂದು ಕ್ಷಮಿಸಲಿಕ್ಕಾದೀತೆ? ಖಂಡಿತ ಸಾಧ್ಯವಿಲ್ಲ. ಯಾಕೆಂದರೆ ಮಂಜೇಶ್ವರದಿಂದ ಚಂದ್ರಗಿರಿವರೆಗಿನ ಸ್ಥಳನಾಮಗಳನ್ನು ಕೇಳಿದರೆ ಇಲ್ಲಿನ ಪ್ರಾದೇಶಿಕ, ಸಾಂಸ್ಕೃತಿಕ ಭಾಷೆ ಯಾವುದು ಎಂದು ತಿಳಿಯುತ್ತದೆ. ಒಂದು ಸ್ಥಳದ ಹೆಸರು ಎಲ್ಲಿಂದಲೋ ಬರುವುದಿಲ್ಲ. ಅದರ ಹಿಂದೆ ಒಂದು ದೊಡ್ಡಚರಿತ್ರೆಯಿರುತ್ತದೆ. ಇಲ್ಲಿನ ದೇವಾಲಯಗಳು, ದೈವಸ್ಥಾನಗಳು, ಹಬ್ಬಹುಣ್ಣಿಮೆಗಳು, ಜಾನಪದ ಕುಣಿತಗಳು, ಯಕ್ಷಗಾನ ಎಲ್ಲವೂ ಹೇಳುತ್ತವೆ - ಇಲ್ಲಿನ ಮಾತೃಭಾಷೆ ಯಾವುದೆಂದು. ಭಾಷೆಯನ್ನು ಸೂಚಿಸದ, ಜಾತಿಯನ್ನು ಸೂಚಿಸದ ಇಲ್ಲಿನ ಜನರ ಹೆಸರುಗಳು ಹೇಳುತ್ತವೆ ತಾವು ಯಾರು ಎಂದು". ಹೀಗೆ ಅವರು ಹೇಳಿರುವುದು ಕೇವಲ ಭಾವುಕರಾಗಿ ಅಲ್ಲ. ಕಾಸರಗೋಡಿನಲ್ಲಿ ಹುಟ್ಟಿಬೆಳೆದು ಇಲ್ಲಿನ ಚಾರಿತ್ರಿಕ ವಾಸ್ತವವನ್ನು ಅರ್ಥಮಾಡಿಕೊಂಡವರಾಗಿ.

'ಗುಳಿಗೆ' ಎಂಬ ಪ್ರಬಂಧ ಸಂಕಲನದ ಮೂಲಕ ಪ್ರಾರಂಭವಾದ ಅವರ ಸಾಹಿತ್ಯಯಾನ ನಿರಂತರವಾಗಿ ಮುಂದುವರಿದು ಕಾದಂಬರಿ, ಕತೆ, ಕವನ, ನಾಟಕ, ಮಕ್ಕಳ ಸಾಹಿತ್ಯ, ವೈಚಾರಿಕ - ಹೀಗೆ ಹಲವು ಪ್ರಕಾರಗಳ ಮೂಲಕ ಜನರನ್ನು ತಲುಪಿ, ಒಬ್ಬ ಜನಪ್ರಿಯ ಲೇಖಕರಾಗಿ ಅನೇಕ ಅಭಿಮಾನಿ ಓದುಗರನ್ನು ಪಡೆದರು. ಅಕಡೆಮಿಕ್ ವಿಮರ್ಶಕರು ಅವರ ಸಾಹಿತ್ಯಸೃಷ್ಟಿಯನ್ನು ಜನಪ್ರಿಯ ಸಾಹಿತ್ಯದ ಪಟ್ಟಿಗೆ ಸೇರಿಸಿ ಗಂಭೀರ ವಿಮರ್ಶೆಗೆ ಒಳಪಡಿಸುವ ಉತ್ಸಾಹ ತೋರಲಿಲ್ಲ. ಆದರೆ ಇದರಿಂದ ಗಟ್ಟಿಯವರು ಎಂದೂ ವಿಚಲಿತರಾಗದೆ ತಮ್ಮ ಸೃಜನಶೀಲತೆಯ ಒಳಗಿನ ಅಗತ್ಯವಾದ ಪ್ರಯೋಗಶೀಲತೆಯಿಂದ, ಭಿನ್ನ ಕಥಾವಸ್ತುಗಳಿಂದ ಓದುಗರನ್ನು ಮುಟ್ಟಿದರು. 'ಜನಪ್ರಿಯ' ಎಂದು ತಮ್ಮ ಸಾಹಿತ್ಯವನ್ನು ಕರೆದರೆ ಅದರ ಬಗ್ಗೆ ಬೇಸರಿಸಬೇಕಾದ ಅಗತ್ಯವಿಲ್ಲ. ಬದಲಾಗಿ ಅದನ್ನು ಒಂದು ಕಾಂಪ್ಲಿಮೆಂಟ್ ಆಗಿ ಸ್ವೀಕರಿಸುವ ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಅವರು ಮೆರೆದರು. ಸಾಹಿತ್ಯಸೃಷ್ಟಿಯ ಕುರಿತು ಅವರಿಗೆ ಅವರದೇ ಆಲೋಚನೆಗಳಿದ್ದವು. ಅವರ 'ಮೂರನೆಯ ಧ್ವನಿ' ಸಂಕಲನವು ಸಾಹಿತ್ಯಕ್ಕೆ ಇರಬೇಕಾದ ಸಾಮಾಜಿಕ ಬದ್ಧತೆಯ ಬಗ್ಗೆ, ಸಾಹಿತಿಯ ಜವಾಬ್ದಾರಿಯ ಬಗ್ಗೆ, ವಿಮರ್ಶೆಯ ಕಾರ್ಯದ ಬಗ್ಗೆ ಹಲವು ವಿಚಾರಗಳನ್ನು ತೆರೆದಿಡುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯನ್ನು ಮಾತ್ರವಲ್ಲದೆ ಜಾಗತಿಕ ಸಾಹಿತ್ಯವನ್ನೂ ವಿಪುಲವಾಗಿ ಓದಿಕೊಂಡ ಹಿನ್ನೆಲೆ ಹಾಗೂ ಸ್ವತಃ ಸಾಹಿತ್ಯಸೃಷ್ಟಿಯ ಹಿನ್ನೆಲೆ ಅವರ ಈ ವಿಚಾರಗಳಿಗೆ ಇವೆ.

ತಂದೆಯನ್ನು ಬೇಗ ಕಳಕೊಂಡು, ಮನೆಯ ಹಿರಿಮಗನಾಗಿ ತಮ್ಮ ಕರ್ತವ್ಯವನ್ನು ಪೂರೈಸಿದ ಅವರು ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯಲ್ಲೂ ಮಾದರಿಯಾಗುತ್ತಾರೆ. ಅವಿವಾಹಿತರಾಗಿದ್ದ ಅಕ್ಕ ಯಮುನಾರನ್ನು ಅವರ ಕೊನೆಗಾಲದವರೆಗೆ ಅಕ್ಕರೆಯಿಂದ ಅವರು ನೋಡಿಕೊಂಡ ಬಗ್ಗೆ ಅವರ ಒಡನಾಡಿಗಳು ಬಹಳಷ್ಟು ಹೇಳಿದ್ದಾರೆ. ಅವರ ಮಕ್ಕಳು, ಮಡದಿ, ನಿಕಟ ಒಡನಾಡಿಗಳು, ಎಲ್ಲರ ಮನದಲ್ಲಿ ನೆಲೆನಿಂತ ಗಟ್ಟಿಯವರ ವ್ಯಕ್ತಿತ್ವ ಮಾನವೀಯ ಸ್ಪಂದನವುಳ್ಳದ್ದು. ಅದು ತೋರಿಕೆಯದ್ದಾಗಿರದೆ ಕ್ರಿಯೆಯಲ್ಲಿ ಪ್ರಕಟವಾಗುವಂಥದ್ದು. ಬರಿಯ ಬೂಟಾಟಿಕೆ, ಕುರುಡು ನಂಬಿಕೆ, ಅವೈಜ್ಞಾನಿಕ ಆಚರಣೆಗಳಿಂದ ದೂರವಿದ್ದ ಅವರು ವೈಚಾರಿಕ, ಚಿಂತನಶೀಲ ಮತ್ತು ಸಹೃದಯಿ ನಡೆಗಳ ಅಪೂರ್ವ ಸಂಗಮವಾಗಿದ್ದರು. ಮಾನವತೆಗೆ ಭೂಷಣವಾಗಿರುವ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅವರಿಗೆ ಅಪಾರಪ್ರೀತಿ ಇತ್ತು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದ ಔಪಚಾರಿಕ ತರಬೇತಿಯನ್ನು ಪಡೆದು ಶಿಕ್ಷಣ ಕ್ಷೇತ್ರದಲ್ಲಿ ದುಡಿದು ಅಪಾರ ಅನುಭವವನ್ನು ಗಳಿಸಿದ ಅವರು, ಬದಲಾದ ಕಾಲಮಾನದ ಹಿನ್ನಲೆಯಲ್ಲಿ ಈ ಕ್ಷೇತ್ರದ ಅಗತ್ಯಗಳನ್ನು